ಬೆಂಗಳೂರು ಡಿವೀಜ್ಯ ಸೆಂಟ್ರಲ್ ರಿಕಾರ್ಡ್ ಆಫೀಸ್.

ರಿಕಾರ್ಡುಗಳನ್ನು ನಾಶ ಪಡಿಸುವಿಕೆ.

ತೋಃ 6ನೆ ಜನವರಿ 1909.

ಮೈಸೂರು ಚೀಫ್ ಕೋರ್ಟ್ಸು 1905ನೆ ಇಸವಿ ಸೆಪ್ಟಂಬರು 26ನೆ ಮುಕ್ತಂ 122ನೆ ನಂಬರು ರೂಲ್ಸು ಆಫ್ ಪ್ರ್ಯಾಕ್ಟೀಸ್ ಅನುಸರಿಸಿ ಇದರಿಂದ ಸರ್ವಸ್ಸರಿಗೂ ತಿಳಿಯಪಡಿಸುವದೇನಂದರೆ—

ಈ ಡಿವಿಜನಿಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1907ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜೂ 30ನೆ ತಾರೀಖಿನ ವರೆಗೆ ದಾಖಲಾದ ಈ ಕೆಳಗೆ ವಿವರಿಸಿರುವ ಮೊಕದ್ದಮೆಗಳ ಪೈಕಿ ಪೈಸಲಾದವುಗಳಲ್ಲಿ ಕಕ್ಷಿಗಾರರಿಂದಲೂ ಮತ್ತು ಸಾಕ್ಷಿಗಳಿಂದಲೂ ಸಹಾ ಹಾಜರ್ಮಾಡಲ್ಪಟ್ಟ ವಿಶಿಷ್ಟ ದಸ್ತೈವಜುಗಳು ಮೊದಲೇ ವಾಪಸು ತೆಗದುಕೊಳ್ಳಲ್ಪಡದೇ ಇದ್ದಪಕ್ಷದಲ್ಲಿ ಮೇಲ್ಕಂಡ ರೂಲ್ಸು ಆಫ್ ಪ್ರ್ಯಾಕ್ಟೀಸಿನಲ್ಲಿ ಉದಕರಿಸಿರುವ ವಾಯಿದೆ ನಂತರ ನಾಶಪಡಿಸಲ್ಪಡುತ್ತೆಂ ತಿಳಿಯುವುದು.

ಕೋರ್ಟುಗಳ ಹೆಸರು.	ಇಸವಿ.	ಮೊಕದ್ದಮೆಗಳ ಸ್ವಭಾವ.		
		ಸಿವಿಲ್ ಮೊಕದ್ದಮೆಗಳು.	ಅಮಲ್ಜಾರಿ.	ಮಿಸಲೇನಿಯಸ್.
ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್ಸು.	1907-08	1ರ ಲಾಗಾಯಿತು 1069ರ ವರಿಗೆ.	1ರ ಲಾಗಾಯಿತು 1186ರ ವರಿಗೆ.	1ರ ಲಾಗಾಯಿತು 1135ರ ವರಿಗೆ.
ಬೆಂಗಳೂರು ಪ್ರಿನ್ಸಿಪಾಲ್ ಮುನ್ಸೀಫ್ ಕೋರ್ಟ್ಸು.	ಡಿಟೋ	1ರ ಲಾಗಾಯಿತು 1442ರ ವರಿಗೆ.	1ರ ಲಾಗಾಯಿತು 2223ರ ವರಿಗೆ.	1ರ ಲಾಗಾಯಿತು 857ರ ವರಿಗೆ.
ಬೆಂಗಳೂರು ಅಡಿಷನಲ್ ಮುನ್ಸೀಫ್ ಕೋರ್ಟ್ಸು.	ಡಿಟೋ	1ರ ಲಾಗಾಯಿತು 854ರ ವರಿಗೆ.	1ರ ಲಾಗಾಯಿತು 1078ರ ವರಿಗೆ.	1ರ ಲಾಗಾಯಿತು 651ರ ವರಿಗೆ.
ತುಮ್ಕೂರು ಮುನ್ಸೀಫ್ ಕೋರ್ಟ್ಸು.	ಡಿಟೋ	1ರ ಲಾಗಾಯಿತು 1261ರ ವರಿಗೆ.	1ರ ಲಾಗಾಯಿತು 1283ರ ವರಿಗೆ.	1ರ ಲಾಗಾಯಿತು 619ರ ವರಿಗೆ.
ಮದ್ದಗಿರಿ ಮುನ್ಸೀಫ್ ಕೋರ್ಟ್ಸು.	ಡಿಟೋ	1ರ ಲಾಗಾಯಿತು 691ರ ವರಿಗೆ.	1ರ ಲಾಗಾಯಿತು 503ರ ವರಿಗೆ.	1ರ ಲಾಗಾಯಿತು 300ರ ವರಿಗೆ.
ಚಿಕ್ಕಬಳ್ಳಾಪುರದ ಮುನ್ಸೀಫ್ ಕೋರ್ಟ್ಸು.	ಡಿಟೋ	1ರ ಲಾಗಾಯಿತು 1326ರ ವರಿಗೆ.	1ರ ಲಾಗಾಯಿತು 1346ರ ವರಿಗೆ.	1ರ ಲಾಗಾಯಿತು 774ರ ವರಿಗೆ.
ಕೋಲಾರ ಮುನ್ಸೀಫ್ ಕೋರ್ಟ್ಸು.	ಡಿಟೋ	1ರ ಲಾಗಾಯಿತು 713ರ ವರಿಗೆ.	1ರ ಲಾಗಾಯಿತು 811ರ ವರಿಗೆ.	1ರ ಲಾಗಾಯಿತು 428ರ ವರಿಗೆ.
ಕೋಲಾರದ ಗಣಿ ಮುನ್ಸೀಫ್ ಕೋರ್ಟ್ಸು.	ಡಿಟೋ	1ರ ಲಾಗಾಯಿತು 1504ರ ವರಿಗೆ.	1ರ ಲಾಗಾಯಿತು 2200ರ ವರಿಗೆ.	1ರ ಲಾಗಾಯಿತು 578ರ ವರಿಗೆ.

ಟಿ. ಇ. ಜಯರಾಮ ಐಯ್ಯರ್,
ಆಫಿಸರ್ ಇನ್ ಛಾರ್ಜ್ ಆಫ್ ಸೆಂಟ್ರಲ್ ರಿಕಾರ್ಡ್ಸ್, ಬೆಂಗಳೂರು ಡಿವಿಜ್ಯ.

ಶ್ರೀರಂಗಪಟ್ಟಣದ ಮುನ್ಸೀಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಶ್ರೀರಂಗಪಟ್ಟಣ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಕಡತನಾಳಿನಲ್ಲಿರುವ ಗಂಗಡಿಕಾರ ಲಂಕೆಗೌಡನ ಮಗ ನಡಕೆರಿಗೌಡ ಉರಫ್ ಕೊಂನಾರಿ ಅರ್ಜಿ ವಿಷಯದಲ್ಲಿ—

ಸ್ಯ 1908—09ನೆ ಇಸವಿ ದಿವಾಳಿ ಕೇಸ್ ನಂಬರು 391

ಹುಕ್ಕುಂ

ಅರ್ಜಿದಾರ ನಡಕೆರಿ ಗೌಡನು ಮೇಲ್ಕಂಡ ನಂಬರಿನಲ್ಲಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂಬ್ ಅರ್ಜೀದಾರರಾದ ನಡಕೆರಿಗೌಡನ ಪರವಾಗಿ ವಿ॥ ವೆಂಕಟರಾಮ್ಯೈಯ್ಯನವರನ್ನು ಮತ್ತು ಸದರೀ ಯವರ ಲೇಣೇದಾರರಾದ 1ನೆ ಚೌಬೀನೆ ಸಿದ್ದಯ್ಯ, 2ನೆ ರಾಜೆಗೌಡ ಉರುಫ್ ಚಿಕ್ಕಹೈದ ಇವರು ಗೈರ್‌ಹಾಜರು ಸಬಬು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿ ಯಾಗಲಿ ಅಥವಾ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಅರ್ಜಿದಾರ ನಡಕೆರಿಗೌಡ ಉರಫ್ ಕೊಂನಾರಿಯು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥರವಾಗಿ ಯಾಗಲೀ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಎಂದು ಇದರಿಂದ ಹುಕ್ಕುಂ ಮಾಡಲ್ಪಟ್ಟು ಇರುತ್ತೆ.

ಸ॥ 1909ನೆ ಇಸವಿ ಜನವರಿ 8ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನನ್ನ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೀದಾರ, ಅಥವಾ ಹಕ್ಕುದಾರರ ಹಸರು ಮತ್ತು ವಿವರ ಮತ್ತು ಹಾಲಿ ತಿಯಬಂದ ಅವರುಗಳ ವಾಸಸ್ಥಳ.	ಮೊಬಲಗು	ಪಡಿನಾಗ ಪಟ್ಟಿ ನಂಬರು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಪರಾ.
1	ಶ್ರೀರಂಗಪಟ್ಟಣದಲ್ಲಿರುವ ಬೌಬೀನೆ ಶಿದ್ದಯ್ಯನವರ ಮೊಮ್ಮಗಶಿದ್ದಯ್ಯ.	ರೂ. ಆ. ಪೈ. 85– 4–11	...	ಈ ಕೋರ್ಟು ಸಿವಿಲ್ 395-05-6ನೆ ನಂಬರು ಡಿಕ್ರಿ ಬಾಬತ್ತು.	
2	ಶ್ರೀರಂಗಪಟ್ಟಣದ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಕೊಡತನಳಿನಲ್ಲಿರುವ ರಾಜೆಗೌಡ ಉರಫ್ ಚಿಕ್ಕಹೈದ.	94-13- 9	..	ಸಿವಿಲ್ 1376-04-5ನೆ ನಂಬರು ಡಿಕ್ರಿ ಬಾಬತ್ತು.	

ಎಸ್. ಕೃಷ್ಣರಾವ್,
ಮುನ್ಸೀಫ್.

ಹಾಸನದ ಮುನ್ಸೀಫ್ ಕೋರ್ಟಿನಲ್ಲಿ.

ಅಸಲ್ ಮೊಕದ್ದಮೆ ನಂಬರು 349 of 1908—09.

ಹಾಸನದ ತಾಲ್ಲೂಕು ಸಾಲ್ಗಾಮೆ ಹೋಬಳಿ ಉಗನೇದ ಗ್ರಾಮದಲ್ಲಿರುವರು—

ವಾದಿಗಳು.	ಪ್ರತಿವಾದಿ.
1. ಅಪ್ಪಣಗೌಡರ ಮಗ ಹುಲಗೌಡ, 2ನೆ ಈರೇಗೌಡರ ಮಗ ಹುಲಿಗೌಡ, 3ನೆ ಬಾಳೇಗೌಡರ ಮಗ ಹಲಗೇಗೌಡ, 4ನೆ ಇನ್ನೊಬ್ಬ ಬಾಳೇ ಗೌಡರ ಮಗ ಚನ್ನಬಸವೇಗೌಡ.	ಡಿಟೋ ಗ್ರಾಮದಲ್ಲಿರುವ ಮಲ್ಲೇಗೌಡ ಉರಫ್ ಮಾಗಣಗೌಡರ ಮಗ ಮರಿಗೌಡ ಉರಫ್ ವಡೆರಗೌಡ.

ಇದರಿಂದ ಹಾಸನದ ತಾಲ್ಲೂಕು ಸಾಲ್ಗಾಮೆ ಹೋಬಳಿ ಉಗನೇದ ಗ್ರಾಮಸ್ಥರಿಗೆ ತಿಳಿಯಪಡಿಸುವದೇನಂದರೆ :—

ಸದರೀ ಉಗನೇದ ಗ್ರಾಮದ ಆಂಜನೇಯದೇವರ ದೇವಸ್ಥಾನದ ದುರಸ್ತು ಬಗ್ಯೆ ಚಂದಾ ವಸೂಲ್ಮಾಡಿ ಆ ಪೈಕಿ ಪ್ರತಿವಾದಿ ಬಳಿಬಾಕಿ ನಿಂತ (51—0—0) ರೂಪಾಯಿಗಳು ಕೋರ್ಟ್ ಖರ್ಚು ಮತ್ತು ಚಾಲ್ತಿ ಬಡ್ಡಿ ಸಹ ಬರಮಾಡಿಸಿ ಕೊಡಬೇಕೆಂದು ಮೇಲ್ಕಂಡ ವಾದಿರು ದಾವಾ ಮಾಡಿರುತ್ತಾರೆ. ಈ ದಾವಾವನ್ನು ಮೇಲ್ಕಂಡ ವಾದಿಗಳು ಈ ಉಗನೇದ ಗ್ರಾಮಸ್ಥರಿಗೆಲ್ಲರಿಗೋ ಸ್ತರ ತಂದಿರುವದಾಗಿ ನಮೂದಿರುತ್ತೆ. ಆದ್ದರಿಂದ ಸಿವಿಲ್ ಪ್ರೊಸೀಡ್ಯೂರ್ ಕೋಡ್ 30ನೆ ಸೆಕ್ಷನ್ ಪ್ರಕಾರ ಈ ವಾದಿಗಳು ಇತರ ಈ ಗ್ರಾಮಸ್ಥರಿಗೆಲ್ಲರಿಗೋಸ್ಕರ ಈ ದಾವಾ ನಡಿಸಲು ಅಪ್ಪಣೆ ಕೊಡಿಸಿಕೊಡಬೇಕಂಮ ಈ ಕೋರ್ಟಿಗೆ ಮನವಿ ಮಾಡಿಕ್ಕೊಂಡು ದಾವಾ ದಾಖಲ್ಮಾಡಿರುವದರಿಂದ ಇದರಲ್ಲಿ ಹಕ್ಕು ಬಾಧ್ಯತೆ ಪುಳ್ಳವರೆಲ್ಲರೂ 1909ನೆ ಫೆಬ್ರವರಿ 15ನೆ ತಾರೀಖು ಸೋಮವಾರ ದಿವಿ 11 ಗಂಟೆಗೆ ಈ ಕೋರ್ಟು ರೂಬ್‌ರೂಬ್ ಹಾಜರಾಗತಕ್ಕದ್ದಿದೆ.

ಸ॥ 1909ನೆ ಇಸವಿ ಜನವರಿ 9ನೆ ತಾರೀಖಿನಲ್ಲಿ (ಕೋರ್ಟಿನ ಮೊಹರೊಡನೆ) ನನ್ನ ದಸ್ತಖತ್ ನಿಸಿ ಕೊಡಲ್ಪಟ್ಟಿತು.

ಎ. ನರಸಿಂಹ್ಮಯ್ಯಂಗಾರ್,
ಮುನ್ಸೀಫ್.

ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸ್, ಬೆಂಗಳೂರು.

ಸರ್ಕ್ಯುಲರ್ ನಂ. 369—Cs. 24, ತಾರೀಖು 11–12ನೆ ಜನವರಿ 1909ನೆ ಇಸವಿ.

ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರಾದ ಕೋ ಆಪರೇಟಿವ್ ಸೊಸೈಟಿಗಳು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಪಬ್ಲಿಕ್ ಅಕೌಂಟನ್ನು ಇಡಬಹುದೆಂದು ಇಂಡಿಯಾ ಗವರ್ನಮೆಂಟನವರು ಅಪ್ಪಣೆ ಮಾಡಿರುತ್ತಾರೆ. ಸದರಿ ಗವರ್ನಮೆಂಟನವರಿಂದ ಬದಲಾಯಿಸಲ್ಪಟ್ಟ ಪೋಸ್ಟ್ ಆಫಿಸ್ ಸೇವಿಂಗ್ಸ್ ಬ್ಯಾಂಕಿನ 42 (b)ನೆ ರೂಲು ಈ ಕೆಳಗೆ ವಿವರಿಸುವಂತೆ ಇರುತ್ತೆ :—

"ಇಂಡಿಯಾ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿಗಳ ಆಕ್ಟ್ ಮತ್ತು ನೇಟಿವ್ ಸಂಸ್ಥಾನಗಳಲ್ಲಿ ಜಾರಿಯಲ್ಲಿರುವ ಅದೇ ಸಂಬಂಧವಾದ ಕಾನೂನು—ಇವುಗಳನ್ನನುಸರಿಸಿ ರಿಜಿಸ್ಟರು ಮಾಡಲ್ಪಡುವ ಸೊಸೈಟಿಗಳ ಸೆಕ್ರಿಟರಿಗಳು, ಖಜಾನ್ಚಿಯವರು, ಅಥವಾ ಮ್ಯಾನೇಜರುಗಳು ಹಣವನ್ನು ಡಿಪಾಜಿಟ್ ಇಡಬಹುದು."

2. ಸೊಸೈಟಿಗಳಿಗೆ ಪಬ್ಲಿಕ್ ಅಕೌಂಟನ್ನು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಇಡುವದರಿಂದ ಈ ಕೆಳಗೆ ನಮೂದಿಸಿರುವ ರಿಯಾಯತಿಗಳು ದೊರೆಯುವವು.